**ದಿಃ 08-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ 1, 3 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದಃ**

ಈ ಕೇಸಿನ 1 ನೇ ಪ್ರ ತಿವಾದಿ ನನ್ನ ತಾಯಿ. 3 ನೇ ಪ್ರತಿವಾದಿ ನನ್ನ ಅಕ್ಕ. 3, 7 ನೇ ಪ್ರತಿವಾದಿಯವರು ನನ್ನ ಅಕ್ಕಂದಿರು. ದಾವ ಆಸ್ತಿಗಳು ನನ್ನ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಪ್ರತಿವಾದಿ 1, 3 ಮತ್ತು 7 ರವರಿಗೆ ಹಕ್ಕು ಮತ್ತು ಸಮಾನ ಭಾಗ ಇದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

ದಾವ ಐಟಂ ನಂ. 4 ರ ಖಾತೆಯು ಸದಾಶಿವಪ್ಪನವರ ಹೆಸರಿನಲ್ಲಿದೆ. ದಾವ ಐಟಂ ನಂ. 4 ಕ್ಕೆ ಸಂಬಂದಪಟ್ಟಂತೆ ಪಹಣಿಗಳನ್ನು ಹಾಜರುಪಡಿಸಿದ್ದೇನೆ. ಸದಾಶಿವಪ್ಪ ದತ್ತು ಮಗ ಈಶ್ವರಪ್ಪ ಎಂಬುವವರು ಕ್ರ ಯಕ್ಕೆ ಪಡೆದ ಆಸ್ತಿ ಎಂದರೆ ಸರಿಯಲ್ಲ. ಅಂತಹ ದಾಖಲಾತಿಗಳನ್ನು ನಾನು ನೋಡಿಲ್ಲ. ಈಶ್ವರಪ್ಪ ಮತ್ತು ಶಿವರುದ್ರಪ್ಪ ಇಬ್ಬರು ಅಣ್ಣ ತಮ್ಮಂದಿರು ಎಂದರೆ ಸರಿ. ಸದರಿ ಈಶ್ವರಪ್ಪ ನನ್ನ ಚಿಕ್ಕಪ್ಪ. ದಾವ ಐಟಂ ನಂ. 4 ಸದಾಶಿವಪ್ಪನವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಈಶ್ವರಪ್ಪನವರಿಗೆ ಮಕ್ಕಳು ಇಲ್ಲದೇ ಇದ್ದುದ್ದರಿಂದ ಸದಾಶಿವಪ್ಪನವರು ದತ್ತು ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಮನೆಯಲ್ಲಿದ್ದವರನ್ನು ಕರೆದುಕೊಂಡು ಹೋಗಿ ಈಶ್ವರಪ್ಪನವರ ಜತೆಯಲ್ಲಿ ವಾಸ ಮಾಡುತ್ತಿದ್ದ್ನರು ಎಂದು ಸಾಕ್ಷಿ ನುಡಿಯುತ್ತಾರೆ. ಸುಮಾರು 78-79 ನೇ ಇಸವಿಯಲ್ಲಿ ಸದಾಶಿವಪ್ಪನವರನ್ನು ಕರೆದೊಂಡು ಹೋದರು ಅವರಿಗೆ ಮದುವೆ ಮಾಡಿ ಈಶ್ವರಪ್ಪನವರು ಅಲ್ಲೇ ಇಟ್ಟುಕೊಂಡಿದ್ದರು. ಎರಡು ಕಡೆಯ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು. ಈಶ್ವರಪ್ಪನವರ ಜತೆಗೆ ಹೋದ ನಂತರ ಸದಾಶಿವಪ್ಪನವರು ದಾವಾ ಐಟಂ ನಂ. 4 ನ್ನು ಈಶ್ವರಪ್ಪ ಕೊಂಡುಕೊಂಡರು ಎಂದರೆ ಸರಿಯಲ್ಲ.

ಶಿವರುದ್ರಪ್ಪ ಮತ್ತು ಈಶ್ವರಪ್ಪ ಒಟ್ಟು ಕುಟುಂಬದಲ್ಲಿದ್ದರು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಈಶ್ವರಪ್ಪನವರು ತೀರಿಕೊಂಡ ನಂತರ ಸದಾಶಿವಪ್ಪನವರೇ ಈಶ್ವರಪ್ಪನವರ ಕುಟುಂಬದ ವ್ಯವಹಾರಗಳನ್ನು ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿಯು ಎರಡು ಕಡೆ ಕೂಡ ಅವರೇ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಶಿವರುದ್ರಪ್ಪ ಮತ್ತು ಈಶ್ವರಪ್ಪನವರ ಎರಡು ಕುಟುಂಬದ ವ್ಯವಹಾರವನ್ನು ಸದಾಶಿವಪ್ಪನವರೇ ನೋಡಿಕೊಳ್ಳುತಿದ್ದರು ಅಂತಾ ದಾವೆಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೇನೆ. ನಮ್ಮ ತಂದೆಯವರು ತೀರಿಕೊಂಡು ಅಂದಾಜು 10 ವರ್ಷವಾಗಿರಬಹುದು. ಈಶ್ವರಪ್ಪನವರು ನಮ್ಮ ತಂದೆ ತೀರಿಕೊಳ್ಳುವ ಎರಡು ವರ್ಷಗಳ ಮುಂಚೆ ತೀರಿಕೊಂಡರು. ಈಶ್ವರಪ್ಪ ಮತ್ತು ಶಿವರುದ್ರಪ್ಪ

ಇಬ್ಬರೂ ಸೇರಿ ನಮ್ಮ ಜತೆ ಬಂದು ಮತದಾನ ಮಾಡಿದ ಬಗ್ಗೆ ದಾಖಾಲತಿಗಳು ಇವೆ. ಈಶ್ವರಪ್ಪನವರ ಹೆಂಡತಿ ಶಿವಲಿಂಗಮ್ಮ, ಸದಾಶಿವಪ್ಪ ಮತ್ತು ರುದ್ರಮ್ಮ ಇವರೆಲ್ಲರೂ ಕೂಡ ಒಟ್ಟು ಕುಟುಂಬದಲ್ಲಿ ವಾಸ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನಾವು ಕೂಡ ಅಲ್ಲಿಗೆ ಹೋಗಿ ಬರುತ್ತೇವೆ ಎಂದು ನುಡಿಯುತ್ತಾರೆ.

ವಿ ಎಸ್ ಲೋಕೇಶಪ್ಪ ನನ್ನ ಅಣ್ಣ 4 ನೇ ಪ್ರತಿವಾದಿ ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಮಾಹಿತಿ ಇಲ್ಲ. 4 ನೇ ಪ್ರತಿವಾದಿಯು 2000 ನೇ ಇಸವಿಯಲ್ಲಿ ಪಾಲು ವಿಭಾಗ ಮಾಡಿಕೊಂಡು ನಮ್ಮ ನಮ್ಮ ಸ್ವಾಧೀನಲ್ಲಿದ್ದೇವೆ ಎಂದು ಬರೆಸಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ. ನಮಗೆ ಯಾವುದೇ ಆಸ್ತಿಯನ್ನು ಭಾಗ ಮಾಡಿಕೊಟ್ಟಿಲ್ಲ ಜೀವನಕ್ಕೆ ಇಷ್ಟು ಆಸ್ತಿ ಮಾಡಿಕೊಳ್ಳಿ ಎಂದು ಮಾತ್ರ ಕೊಟ್ಟಿದ್ದರು, ಹೆಚ್ಚು ಆಸ್ತಿಯನ್ನು ಅವರೇ ಇಟ್ಟುಕೊಂಡಿದ್ದಾರೆ ಎಂದು ನುಡಿಯುತ್ತಾರೆ ಮತ್ತು ನಾವು ಆಸ್ತಿಯನ್ನು ಹಂಚಿಕೊಂಡಿಲ್ಲ ಎಂದು ನುಡಿಯುತ್ತಾರೆ. ಸದಾಶಿವಪ್ಪನವರು ಸ.ನಂ.13/2 ರಲ್ಲಿ 1 ಎಕರೆ 13 ಗುಂಟೆ, ಸಂ.ನಂ. 85/ಪಿ2 ರಲ್ಲಿ 1 17.5 ಗುಂಟೆ, ಸ.ನಂ.ಪಿ ನಲ್ಲಿ 1 ಎಕರೆ 7.5 ಗುಂಟೆ ಜಮೀನು ಮತ್ತು ಮನೆ, ಕಣ ನನ್ನ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ಪರಮೇಶ್ವರಪ್ಪನವರು ಸ.ನಂ. 16/1 ಪಿ-ಪಿ1 ರಲ್ಲಿ 1 ಎಕರೆ, 137/3 ರಲ್ಲಿ 1 ಎಕರೆ 31 ಗುಂಟೆ, 55/1-ಪಿ1 ರಲ್ಲಿ 2 ಎಕರೆ ಜಮೀನು ನನ್ನ ಹೆಸರಿಗೆ ಬಂದಿದೆ ಎಂದು ಬರೆಸಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಆಸ್ತಿಗಳಲ್ಲಿ ಲೋಕೇಶಪ್ಪ ಮತ್ತು ಪರಮೇಶ್ವರಪ್ಪನವರ ು ಕುಟುಂಬದರು ಹಂಚಿಕೊಂಡು ಈಗಲೂ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಕೆ ಪಿ ಗೀರೀಶ್ ಎಂಬುವವರು ನನ್ನ ಅಕ್ಕನ ಮಗ. ಸ.ನಂ.10/5 ರಲ್ಲಿ 19 ಗುಂಟೆ ಜಮೀನು ಈಗ ಗೀರೀಶ್ ನವರ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಆಸ್ತಿಯನ್ನು ಲೋಕೇಶಪ್ಪನವರಿಂದ ನಾನು ಕ್ರಯಕ್ಕೆ ಕೊಂಡು ಕೊಂಡು ಅದನ್ನು ಕೆ ಪಿ ಗೀರೀಶ್ ರವರಿಗೆ ಮಾರಟ ಮಾಡಿದ್ದೇನೆ ಎಂದರೆ ಸರಿ. ನಾವೆಲ್ಲರೂ ವಿಭಾಗವಾದ ನಂತರ ಮಾರಾಟ ಮಾಡಿರುವಂತಹ ಆಸ್ತಿ ಎಂದರೆ ಸಾಕ್ಷಿಯು ಅದನ್ನು ನಾನು ಬೇರೆಯವರಿಂದ ಕೊಂಡುಕೊಂಡು ಮಾರಾಟ ಮಾಡಿದ್ದೇನೆ ಎಂದು ನುಡಿಯುತ್ತಾರೆ.

ಐಟಂ ನಂ. 10 ಸದಾಶಿವಪ್ಪನವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ಬಿ ಷೆಡ್ಯೂಲ್ ಆಸ್ತಿಗಳು ಕೂಡ ಸದಾಶಿವಪ್ಪನವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಎಂ ವಿ ವಕೀಲರಿಂದಃ ಕೋರಿಕೆಯ ಮೇರೆಗೆ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**ದಿಃ 08-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಈ ಕೇಸನ್ನು ಯಾವ ಪರಿಹಾರವನ್ನು ಕೋರಿ ಹಾಕಲಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವ ಆಸ್ತಿಯ ನಂಬರ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನಾಗರಾಜಪ್ಪ ನವರು ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿದ್ದಾರೆ. 1 ನೇ ಪ್ರತಿವಾದಿ ಹೇಳಿದಂತೆ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ. ಈ ಪ್ರಕರಣದ ಕುರಿತಾಗಿ ನನಗೆ ಯಾವುದೇ ರೀತಿಯ ವಿಚಾರ ನನಗೆ ಗೊತ್ತಿಲ್ಲ. ನನಗೆ ಯಾವುದೇ ರೀತಿಯ ಮಾಹಿತಿ ಇಲ್ಲದಿದ್ದರೂ ಕೂಡ ನ್ಯಾಯಾಲಯಕ್ಕೆ ಬಂದು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.